ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 1-12
©*IIMRD*, Mysuru

IIMRD JOURNALS
www.iimrd.com

# ಗದಗ ಜಿಲ್ಲೆಯ ಪ್ರಾಚೀನ ಕವಿಗಳು

**ಡಾ. ಮಲ್ಲಪ್ಪ ಬಂಡಿ**
ಸಹಾಯಕ ಪ್ರಾಧ್ಯಾಪಕರು, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಸಾರಾಂಶ: (Abstract)**

*ಕನ್ನಡ ನಾಡಿನ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚರಿತ್ರೆಯನ್ನು ಸಮಗ್ರವಾಗಿ ಪುನರ್‌ರಚಿಸಲು, ಅದರ ಅವಿಭಾಜ್ಯ ಅಂಗಗಳಾದ ವಿವಿಧ ಪ್ರಾದೇಶಿಕ ಸಾಹಿತ್ಯ ಪರಂಪರೆಗಳ ಪುನರ್‌ಅವಲೋಕನ ಅತ್ಯಂತ ಅಗತ್ಯವಾಗಿದೆ. ಈ ದೃಷ್ಟಿಯಿಂದ ಬೆಳ್ವಲ ಮುನ್ನೂರು ಆಡಳಿತ ವಿಭಾಗಕ್ಕೆ ಸೇರಿದ್ದ ಇಂದಿನ ಗದಗ ಜಿಲ್ಲೆಯ ಸಾಹಿತ್ಯ ಪರಂಪರೆಯ ಅಧ್ಯಯನವು ವಿಶೇಷ ಮಹತ್ವವನ್ನು ಪಡೆದುಕೊಳ್ಳುತ್ತದೆ. ಪ್ರಾಚೀನ ಕಾಲದಿಂದಲೇ ಗದಗ ಪ್ರದೇಶವು ಸಾಹಿತ್ಯ, ಧರ್ಮ, ಶಿಕ್ಷಣ ಹಾಗೂ ಸಂಸ್ಕೃತಿಯ ಪ್ರಮುಖ ಕೇಂದ್ರವಾಗಿ ಬೆಳೆದಿದ್ದು, ಅನೇಕ ಕವಿಗಳು, ವಿದ್ವಾಂಸರು ಮತ್ತು ಸಂತರನ್ನು ಕನ್ನಡ ಸಾಹಿತ್ಯಕ್ಕೆ ನೀಡಿದೆ. ಹಿಂದೆ ಅವಿಭಜಿತ ಧಾರವಾಡ ಜಿಲ್ಲೆಯ ಭಾಗವಾಗಿದ್ದ ಈ ಪ್ರದೇಶವು ಸುಮಾರು ಎರಡು ದಶಕಗಳ ಹಿಂದೆ ಸ್ವತಂತ್ರ ಜಿಲ್ಲೆಯ ಸ್ಥಾನಮಾನವನ್ನು ಪಡೆದುಕೊಂಡಿದೆ. ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವೈಶಿಷ್ಟಗಳಿಂದ ವಿಶಿಷ್ಟ ಗುರುತನ್ನು ಹೊಂದಿರುವ ಗದಗ ಜಿಲ್ಲೆಯು ಕನ್ನಡ ಕಾವ್ಯ ಪರಂಪರೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಇಲ್ಲಿನ ಪ್ರಾಚೀನ ಕವಿಗಳ ಕೃತಿಗಳು ಕನ್ನಡ ಭಾಷೆ, ಸಾಹಿತ್ಯ, ಧಾರ್ಮಿಕ ಚಿಂತನೆ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಶ್ರೀಮಂತಗೊಳಿಸುವಲ್ಲಿ ಅಮೂಲ್ಯ ಕೊಡುಗೆಯನ್ನು ನೀಡಿವೆ. ಈ ಹಿನ್ನೆಲೆಯಲ್ಲಿ ಗದಗ ಜಿಲ್ಲೆಯ ಪ್ರಾಚೀನ ಕವಿಗಳು ಹಾಗೂ ಅವರ ಸಾಹಿತ್ಯಿಕ ಕೊಡುಗೆಗಳನ್ನು ಪರಿಚಯಿಸಿ ಮೌಲ್ಯಮಾಪನ ಮಾಡುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.*

**ಮುಖ್ಯಪದಗಳು (Keywords):** *ಗದಗ ಜಿಲ್ಲೆ, ಪ್ರಾಚೀನ ಕವಿಗಳು, ಕನ್ನಡ ಸಾಹಿತ್ಯ, ಬೆಳ್ವಲ ಮುನ್ನೂರು, ಸಾಹಿತ್ಯ ಪರಂಪರೆ*

**ಪೀಠಿಕೆ**

ಗದಗ ಜಿಲ್ಲೆಯ ಪರಿಸರದಲ್ಲಿ ವಿಪುಲ ಪ್ರಮಾಣದ ಕಾವ್ಯಮಯವಾದ ಶಿಲಾ ಬರಹಗಳು, ಗ್ರಂಥರೂಪದ ಸಾಹಿತ್ಯ ರಾಶಿಯು ಉಪಲಬ್ಧವಾಗಿರುವದನ್ನು ಅನೇಕ ವಿದ್ವಾಂಸರು ಗುರುತಿಸಿದ್ದಾರೆ.[1] ಈ ಸಾಹಿತ್ಯ ರಾಶಿಗೆಲ್ಲ ಅಸಾಧಾರಣ ಜೀವ ಸತ್ವವನ್ನು ತುಂಬಿದ ಮೌಖಿಕ ಸಾಹಿತ್ಯವು ಸಮೃದ್ಧವಾಗಿಯೇ ಇರುವುದು ಗಮನಾರ್ಹ ಸಂಗತಿ. ಈ ಕುರಿತಂತೆ ಬೆಳ್ವಲದ ಬೆಳಕು ಸ್ಮರಣಸಂಚಿಕೆ, ಮುಳಗುಂದ ನಾಡು ಒಂದು ಅಧ್ಯಯನ, ಗದಗ

*Please cite this article as:* ಮಲ್ಲಪ್ಪ ಬಂಡಿ. (2026). ಗದಗ ಜಿಲ್ಲೆಯ ಪ್ರಾಚೀನ ಕವಿಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 1–12

ಜಿಲ್ಲೆಯ ಪ್ರಾಚೀನ ಸಾಹಿತ್ಯ ಮೊದಲಾದ ಶೋಧ ಕೃತಿಗಳು ಈ ವಿಷಯದ ಮೇಲೆ ಬೆಳಕು ಚೆಲ್ಲಿವೆ. ಆದ್ದರಿಂದ ಪ್ರಸ್ತುತ ಲೇಖನವು ಗ್ರಂಥ ರೂಪದ ಸಾಹಿತ್ಯ ಕೃತಿಗಳನ್ನು ರಚಿಸಿದ ಕವಿಗಳ ಪರಂಪರೆಯನ್ನು ಅವರ ಕೃತಿಗಳ ತಾತ್ವಿಕ ನೆಲೆಗಳನ್ನು, ಮೌಲ್ಯಿಕ ನಿಲುವುಗಳನ್ನು ವಿವೇಚನೆಗೆ ಒಳಪಡಿಸುವ ಉದ್ದೇಶಕ್ಕೆ ತನ್ನನ್ನು ಮಿತಗೊಳಿಸಿಕೊಂಡಿದೆ. ಈ ವಿವೇಚನೆಯಲ್ಲಿ ವಿಸ್ತಾರಕ್ಕಿಂತ ಸ್ಥೂಲವಾದ ಸಮೀಕ್ಷೆಗೆ ಒತ್ತುಕೊಡಲಾಗಿದೆ. ಮತ್ತು ಅಲ್ಲಲ್ಲಿ ಮುಖ್ಯವಾದ ಕೆಲವು ಹೊಸ ನೋಟಗಳನ್ನು ಕಾಣಿಸಲಾಗಿದೆ.

ಗದಗ ಜಿಲ್ಲೆಯ ಪ್ರದೇಶವು ಸಾಹಿತ್ಯ ಕಲೆಗಳ ಬೆಳವಣಿಗೆಗೆ ಫಲವತ್ತಾದ ನೆಲವೆನಿಸಿದೆ. ಅದು ಕನ್ನಡ ಸಾಹಿತ್ಯ ಪರಂಪರೆಯ ಎಲ್ಲ ಘಟ್ಟಗಳಲ್ಲಿಯು ತನ್ನ ಸಕ್ರಿಯ ಭೂಮಿಕೆಯನ್ನು ನಿರ್ವಹಿಸಿದೆ. ಕ್ರಿ.ಶ. 900–1100 ರ ಅವಧಿಯಲ್ಲಿ ಹಾಕಿಸಲಾದ ಶಿಲಾಬರಹಗಳಲ್ಲಿ ಚಂಪೂ ಶೈಲಿಯಲ್ಲಿ ಬರೆಯಲ್ಪಟ್ಟ ಕಾವ್ಯಮಯ ರಚನೆಗಳು ಕಂಡುಬಂದಿವೆ. ಈ ಪದ್ಯ ಶಾಸನಗಳು ಗದಗ ಪರಿಸರದ ಕಾವ್ಯಪರಂಪರೆಯ ಉದಯ ಕಾಲವನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತವೆ. ಮುಂದಿನ 11 ನೇ ಶತಮಾನದಿಂದ ಗ್ರಂಥ ರೂಪದ ಸಾಹಿತ್ಯ ರಾಶಿಯು ಕಾಣಸಿಗುತ್ತದೆ. ಚಂಪೂ, ವಚನ, ಷಟ್ಪದಿ, ಸ್ವರವಚನ, ತತ್ವಪದ ಹೀಗೆ ಎಲ್ಲಾ ಸಾಹಿತ್ಯ ಪ್ರಕಾರಗಳು ಇಲ್ಲಿನ ಕವಿಗಳ ಅಭಿವ್ಯಕ್ತಿಯ ಪ್ರಯೋಗಶಾಲೆಗಳಾದವು. ಮಾತ್ರವಲ್ಲ ಷಟ್ಪದಿಯಂತಹ ಸಾಹಿತ್ಯ ರೂಪ ತನ್ನ ಸಿದ್ಧಿಯ ಶಿಖರವನ್ನು ಮುಟ್ಟಿದ್ದು ಕುಮಾರವ್ಯಾಸ ಚಾಮರಸರಂತಹ ಈ ಪ್ರದೇಶದ ಉದ್ದಾಮ ಕವಿಗಳಿಂದ ಎನ್ನಬೇಕು. ಹೀಗಾಗಿ ಈ ಪ್ರದೇಶದಲ್ಲಿ ದೊರೆತಿರುವ ಸಾಹಿತ್ಯದ ಪ್ರಮಾಣ ಕಡಿಮೆ ಎನಿಸಿದರು ತುಂಬಾ ಪ್ರೌಢವಾದ ಸಾಹಿತ್ಯ ಎಂದು ಹೇಳಬೇಕಾಗುತ್ತದೆ."[2] ಎಂದಿರುವ ಅಭಿಪ್ರಾಯ ಸಾಧುವಾಗಿದೆ.

**ಗದಗ ಜಿಲ್ಲೆಯ ಕವಿಗಳ ಪರಂಪರೆ**

ಈ ಪ್ರದೇಶದಲ್ಲಿ ಆಗಿಹೋದ ಕವಿ ಪರಂಪರೆ ಗಣ್ಯವಾದುದು. ಸಂಖ್ಯಾದೃಷ್ಟಿಯಿಂದಲ್ಲದಿದ್ದರು, ಗುಣ ಮತ್ತು ಗಾತ್ರದಲ್ಲಿ ಹೆಮ್ಮೆಪಡುವಂತಹ ಮೌಲ್ಯಿಕ ಗ್ರಂಥಗಳನ್ನು ರಚಿಸಿದ ಕವಿಗಳ, ಶಾಸ್ತ್ರಕಾರರ ಪರಂಪರೆ ಇಲ್ಲಿನದು. ಈ ಪರಂಪರೆಗೆ ಕುಮಾರವ್ಯಾಸನೆ ಅದ್ವೈರಿಯು; ಉಳಿದ ಕವಿಗಳು ಅದರ ಪಥಗಾಮಿಗಳು. 11 ನೇ ಶತಮಾನದ ದುರ್ಗಸಿಂಹನಿಂದ ಅದು ಮೊದಲಾಗಿ ವಿಭಿನ್ನ ರೂಪ, ವಿಭಿನ್ನ ಆಶಯ, ವಿಭಿನ್ನ ಸಾಹಿತ್ಯ ಚಳುವಳಿಗಳ ಪ್ರವಾಹದಲ್ಲಿ ಬೆರೆತು ವೈವಿಧ್ಯತೆಯನ್ನು, ಪರಿಪೂರ್ಣತೆಯನ್ನು ಪಡೆಯಿತು.

**ಚಂಪೂ ಕವಿಗಳು**

ಈ ಪರಿಸರವು ಬಹಳ ಪ್ರಾಚೀನ ಕಾಲದಿಂದಲು ಸಾಹಿತ್ಯ ಸಂಸ್ಕೃತಿಗಳ ಅರಳುವಿಕೆಗೆ ಫಲವತ್ತಾದ ನೆಲವಾಗಿತ್ತು. ಎಂಬುದನ್ನು ಆಗಲೆ ಪ್ರಸ್ತಾಪಿಸಿದ್ದೇವೆ. ಇದಕ್ಕೆ ಸಾಕ್ಷಿಯೆಂಬಂತೆ ಕನ್ನಡದ ಆದಿ ಶಾಸ್ತ್ರ ಗ್ರಂಥವಾದ ಶ್ರೀವಿಜಯ ಕೃತ ಕವಿರಾಜಮಾರ್ಗದಲ್ಲಿ ಪುಲಿಗೆರೆಯು (ಇಂದಿನ ಲಕ್ಷ್ಮೇಶ್ವರ) ತಿರುಳುಗನ್ನಡ ಪ್ರದೇಶದ ಒಂದು ಸೀಮೆಯಾಗಿತ್ತು ಎಂಬ ಉಲ್ಲೇಖ ಬರುತ್ತದೆ. ಇದು ಈ ಪ್ರದೇಶದ ಭಾಷಿಕ ಅನನ್ಯತೆಯ ಒಂದು ಹೆಗ್ಗುರುತು. ಇನ್ನು ಕನ್ನಡದ ಮಹಾಕವಿ ಪಂಪನ ತಾಯಿಯ ಊರಾದ ಅಣ್ಣಿಗೇರಿಯು ಈ ಪರಿಸರದಲ್ಲಿಯೇ ಇದ್ದು; "ಆದಿಕವಿ ಪಂಪ ತನ್ನ ಜೀವನದ ಸಾರವತ್ತಾದ ಭಾಗವನ್ನು ಇಲ್ಲಿಯೇ ಕಳೆದಿರಬೇಕು"[3] ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಅಷ್ಟೇ ಏಕೆ ಸ್ವತಃ ಪಂಪನೆ ತನ್ನ ಕಾವ್ಯದಲ್ಲಿ "ಸಾಜಮಾದ ಪುಲಿಗೆರೆಯ ತಿರುಳಗನ್ನಡವನ್ನು" ಬಳಸಿರುವುದಾಗಿ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ.

ಇದಲ್ಲದೆ ಲಕ್ಕುಂಡಿಯನ್ನು ಧರ್ಮ ಕ್ಷೇತ್ರವನ್ನಾಗಿ ಮಾಡಿಕೊಂಡು ಧರ್ಮ, ಕಲೆ, ಸಾಹಿತ್ಯಗಳಿಗೆ ಪೋಷಣೆ ಇತ್ತ ದಾನಚಿಂತಾಮಣಿ ಅತ್ತಿಮಬ್ಬೆಯು ಈ ಪ್ರದೇಶದ ಸಾಂಸ್ಕೃತಿಕ ಅಸ್ಮಿತೆಯ ಕುರುಹಾಗಿದ್ದಾಳೆ ಅವಳು ಮಹಾಕವಿ ರನ್ನನಿಗೆ ಆಶ್ರಯ ನೀಡಿದ್ದು, ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಮಾಡಿಸಿ ದಾನ ಮಾಡಿದ್ದು, ಜಿನಾಲಯಗಳನ್ನು ಜಿನಭವನಗಳನ್ನು ನಿರ್ಮಿಸಿದ್ದು ಇವೆಲ್ಲ ಈ ಪರಿಸರ ಒಂದು ಸಾಂಸ್ಕೃತಿಕ ಶಕ್ತಿ ಕೇಂದ್ರವಾಗಿತ್ತು ಎಂಬುದಕ್ಕೆ ಅಪೂರ್ವ ದಾಖಲೆಗಳಾಗಿವೆ. ಪ್ರಾಚೀನ ಕನ್ನಡ ಸಾಹಿತ್ಯ ಪರಂಪರೆಯ ಉಜ್ಜೀವನಕ್ಕೆ ನೀರು ಗೊಬ್ಬರಗಳನ್ನೆರೆದು ಪೋಷಿಸಿದ ಈ ಪ್ರದೇಶ ಅದರ ಮುಂದಿನ ಚಾರಿತ್ರಿಕ ನಡೆಯನ್ನು ನಿರ್ದೇಶಿಸುವ ದೀಪಸ್ತಂಭವಾಯಿತೆನ್ನಬೇಕು.

### *ಮಲ್ಲಿಷೇಣ ಕ್ರಿ ಶ. 1050*

ಇವನು ಮುಳಗುಂದದವನು. ಜಿನಸೇನ ಮುನಿಶ್ವರ ಇವನ ಗುರು. ಇವನು ಮತದಿಂದ ಜೈನನಾಗಿದ್ದು. 'ಮಲ್ಲಿಷೇಣ ಮುನಿ, ಮಲ್ಲಿಷೇಣ ಸೂರಿ, ಯತಿ'[4] ಎಂಬ ಅಭಿದಾನಕ್ಕೆ ಪಾತ್ರನಾಗಿದ್ದನು. ಇವನು ಜೈನ ಧಾರ್ಮಿಕ ಪರಂಪರೆಯಲ್ಲಿ ಪೂಜ್ಯರಾದ ತ್ರಿಷಷ್ಠಿ ಶಲಾಕಾ ಪುರುಷರ ಚರಿತ್ರೆಗೆ ಸಂಬಂಧಿಸಿದ ಕತೆಗಳನ್ನು ಕಾವ್ಯರೂಪದಲ್ಲಿ ನಿರೂಪಿಸುವ 2000 ಶ್ಲೋಕಗಳ ವಿಸ್ತಾರವಾದ ವ್ಯಾಪ್ತಿಯುಳ್ಳ 'ಮಹಾಪುರಾಣ' (ಕ್ರಿ ಶ 1047) ಎಂಬ ಕಾವ್ಯವನ್ನು ಬರೆದನು. ಇದು ಸಂಸ್ಕೃತ ಭಾಷೆಯಲ್ಲಿದ್ದು ಇವನನ್ನು ಮಹಾಕವಿಯೆಂಬ ಅಗ್ಗಳಿಕೆಗೆ ಪಾತ್ರನನ್ನಾಗಿಸಿದ ಕಾವ್ಯ. 'ಪ್ರಥಮಾನು ಯೋಗಪ್ರವಚನ'[5] ಪ್ರವಚನ ಎಂಬ ಹಿರಿಯ ಮನ್ನಣೆ ಈ ಕೃತಿಗೆ ದಕ್ಕಿದೆ. ಈ ಮಲ್ಲಿಷೇಣನು 'ನಾಗಕುಮಾರ ಕಾವ್ಯ','ಭೈರವ ಪದ್ಮಾವತಿ ಕಲ್ಪ', 'ಸರಸ್ವತಿ ಕಲ್ಪ', 'ಜ್ವಾಲಿನಿ ಕಲ್ಪ', ಎಂಬ ಕೃತಿಗಳನ್ನು ರಚಿಸಿರುವುದಾಗಿ ತಿಳಿದುಬರುತ್ತದೆ. ಸಜ್ಜನ ಚಿತ್ತ ವಲ್ಲಭದ ಕರ್ತೃ ಇವನೆ ಇದ್ದಿರುವ ಸಾಧ್ಯತೆಯನ್ನು ಸಂಶೋಧಕರು ವ್ಯಕ್ತಪಡಿಸಿದ್ದಾರೆ.[6] "ಇವನನ್ನು ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ಕೊಟ್ಟ ಕವಿಗಳ ಸಾಲಿನಲ್ಲಿ ಒಬ್ಬನೆಂದು ಗಣಿಸಲಾಗಿದೆ."[7] ಈ ಅಭಿಪ್ರಾಯವನ್ನು ಸಮರ್ಥಿಸುವಂತೆ ಮಲ್ಲಿಷೇಣನ ಕನ್ನಡ ಕೃತಿಗಳಾವುವು ಉಪಲಬ್ದವಿಲ್ಲ. ಮೇಲೆ ಉದ್ಧೃತವಾದ ಕೃತಿಗಳೆಲ್ಲವು ಸಂಸ್ಕೃತದಲ್ಲಿದ್ದು "ಇವನು ಉಭಯಭಾಷಾ ಚಕ್ರವರ್ತಿಯಾಗಿರಬೇಕು."[8] ಎಂಬ ಅಭಿಪ್ರಾಯವನ್ನು ಸತ್ಯವಾಗಿಸುವ ಮಲ್ಲಿಷೇಣ ಕೃತ ಕನ್ನಡ ಕಾವ್ಯಗಳ ಶೋಧ ಇನ್ನು ನಡೆಯಬೇಕಿದೆ.

### *ದುರ್ಗಸಿಂಹ ಕ್ರಿಶ 1030*

ಚಂಪೂ ಕಾವ್ಯದ ಮಹಾ ಮಾರ್ಗವನ್ನು ಬಿಟ್ಟು ಒಂದು ಹೊಸ ಹಾದಿಯನ್ನು ಕಂಡುಕೊಂಡ ಕವಿಗಳು ಇಬ್ಬರು, ಒಬ್ಬ ದುರ್ಗಸಿಂಹ; ಇನ್ನೊಬ್ಬ ನಯಸೇನ. ಪ್ರೌಢವೂ ಗಂಭೀರವೂ ಆದ ಶೈಲಿಯಲ್ಲಿ ಜೈನ ತೀರ್ಥಂಕರರ, ಚಕ್ರವರ್ತಿಗಳ ಉದಾತ್ತ ಚರಿತ್ರೆಗಳನ್ನು ತಮ್ಮ ಕಾವ್ಯಕ್ಕೆ ವಸ್ತುವನ್ನಾಗಿಸಿಕೊಂಡ ಮಾರ್ಗ ಪರಂಪರೆಯನ್ನು ಬಿಟ್ಟು ಸಾಮಾನ್ಯ ಜನತೆಯ ಜೀವನಕ್ಕೆ ಹತ್ತಿರವಾಗುವಂತಹ ಕಥೆಗಳನ್ನು ತಮ್ಮ ಕಾವ್ಯಕ್ಕೆ ವಸ್ತುವನ್ನಾಗಿಸುವ ಕಡೆಗೆ ಹೆಚ್ಚು ಒಲವು ತೋರಿದ ಈ ಇಬ್ಬರು ದೇಶಿಚಂಪೂ ಮಾರ್ಗದ ನಿರ್ಮಾಪಕರು. ದುರ್ಗಸಿಂಹ ಈ ಮಾರ್ಗದ ಮೊದಲ ಪ್ರಯಾಣಿಕ. ಇವನು ಇಂದಿನ ರೋಣ ತಾಲೂಕಿನ ಸವಡಿ (ಸೈಯ್ಯಡಿ) ಎಂಬ ಊರಿನವನು. ಮತದಿಂದ ಬ್ರಾಹ್ಮಣನಾಗಿದ್ದು ಸೈಯಡಿಯಲ್ಲಿ ಹರಿಹರ ಭವನಗಳನ್ನು ಕಟ್ಟಿಸಿದನೆಂದು ತಿಳಿದು ಬರುತ್ತದೆ.[9]

11ನೇ ಶತಮಾನದ ಮೊದಲಾರ್ಧದಲ್ಲಿ ಚಾಲುಕ್ಯ ದೊರೆ ಜಗದೇಕಮಲ್ಲ ಜಯಸಿಂಹನಲ್ಲಿ ದಂಡನಾಯಕನಾಗಿದ್ದ. ಇವನು ಕಲಿಯಾಗಿದ್ದಂತೆ ಮೇಲ್ದರ್ಜೆಯ ಕವಿಯೂ ಆಗಿದ್ದನು. ಇವನು ಬರೆದದ್ದು ಒಂದೆ ಕೃತಿ. ಅದು 'ಕರ್ನಾಟಕ ಪಂಚತಂತ್ರಂ'. ಗುಣಾಢ್ಯನು ಪೈಶಾಚಿ ಭಾಷೆಯಲ್ಲಿ ಬರೆದ 'ಬೃಹತ್ ಕಥೆ' ಕಥಾ ಸಮುದ್ರದಿಂದೆತ್ತಿದ ಪಂಚಕತೆಗಳನ್ನು ವಸುಭಾಗಭಟ್ಟನು ಸಂಸ್ಕೃತದಲ್ಲಿ ನಿರೂಪಿಸಿದ್ದನು. ಈ ಕಥೆಗಳನ್ನು ದುರ್ಗಸಿಂಹನು ಕನ್ನಡಿಸಲು ಕೈ ಹಾಕಿದನು. ಚಂಪುಯುಗ ತೀರಾ ಸಂಪ್ರದಾಯ ಶೀಲವಾಗಿದ್ದ ಕಾಲಘಟ್ಟದಲ್ಲಿ ಮತದಿಂದ ವೈಧಿಕನಾಗಿದ್ದ ಇವನು ಜೈನ ಪರಂರೆಯ ಪಂಚತಂತ್ರವನ್ನು ಪುನರಚಿಸಲು ತೊಡಗಿದ್ದು ಯಾಕೆ ಎಂಬ ಬಗ್ಗೆ ಸಂಶೋಧನೆಗಳು ನಡೆಯಬೇಕಾಗಿದೆ. ಪಂಪಾದಿಗಳು ರೂಢಿಸಿದ ಚಂಪೂವಿನ ರೂಪ ಇವನ ಕಾವ್ಯದಲ್ಲಿ ಮಾರ್ಪಾಡುಗಳಿಗೆ ಒಳಗಾಗಿದೆ. ಇವನ ಕಾವ್ಯದಲ್ಲಿ ಪದ್ಯದ ಪ್ರೌಢತೆ ಮತ್ತು ಸರಳತೆಯಿಂದ ಕೂಡಿದ ಗದ್ಯದ ಆಧಿಕ್ಯ ಎರಡರ ಮಿಶ್ರಣವಿದೆ. ನೀತಿ ಕತಾ ಪ್ರವಚನಕ್ಕಾಗಿ ರೂಪಿಸಿದ ಕಥೆಯೊಳಗೊಂದು ಕಥೆಯ (Story inside a story) ತಂತ್ರ, ಸಾಂಕೇತಿಕವಾದ ಪಾತ್ರ ಸೃಷ್ಟಿಗಳು ವಿಶಿಷ್ಟವಾಗಿದ್ದು ಪ್ರೌಢ ಚಂಪೂ ಮತ್ತು ಗದ್ಯಕಥೆಯ ಹದವಾದ ಬೆರಿಕೆಯಿದೆ. ಈ ಪ್ರಯೋಗವನ್ನೆ ನಾವು 'ದೇಶಿಚಂಪೂ' ಎಂದು ಕರೆಯುತ್ತಿದ್ದೇವೆ. ಈ ಆವಿಷ್ಕಾರವೇ ಪ್ರಾಯಶಃ 'ಪೊಸತಾಗಿ ವಿರಚಿಸುವೆಂ' ಎಂಬ ಅವನ ಉಗ್ಗಡಿಕೆಯನ್ನು ಸೂಚಿಸುತ್ತಿರಬೇಕು.

***2ನೇ ನಯಸೇನ ಕ್ರಿಶ 1112***

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಯಸೇನ ಹೆಸರಿನ ಕವಿಗಳು ಐದು ಜನ ಆಗಿಹೋಗಿದ್ದಾರೆ. ಅವರಲ್ಲಿ ಇಬ್ಬರು ಗದಗ ಪ್ರಾಂತ್ಯಕ್ಕೆ ಸೇರಿದವರಾಗಿದ್ದಾರೆ. ಅವರಲ್ಲಿ ಮೊದಲನೆಯವನನ್ನು ವ್ಯಾಕರಣದ ನಯಸೇನನೆಂದು ಎರಡನೆಯಧರ್ಮಾಮೃತದ ನಯಸೇನನೆಂದು ಗುರುತಿಸಿದ್ದಾರೆ.[10] ಮೊದಲನೆಯ ನಯಸೇನನ ವಿಚಾರವನ್ನು ಮುಂದೆ ಪ್ರಸ್ತಾಪಿಸಲಾಗುವುದು ಧರ್ಮಾಮೃತದ ಕರ್ತೃವಾದ ನಯಸೇನನು ಮುಳಗುಂದದ ಜೈನಮುನಿಗಣಕ್ಕೆ ಸೇರಿದವನು. ಇವನ ಗುರು ಎರಡನೇ ನರೇಂದ್ರ ಸೇನ. ತನ್ನ 85ನೇ ವಯಸ್ಸಿನಲ್ಲಿ ನಯಸೇನ ಈ ಕಾವ್ಯವನ್ನು ಬರೆದನು. ದುರ್ಗಸಿಂಹನು ಅಡಿಪಾಯ ಹಾಕಿದ್ದ ದೇಶಿ ಚಂಪೂವಿನ ಕಾವ್ಯ ಮಾರ್ಗಕ್ಕೆ ಭದ್ರ ಬುನಾದಿ ಹಾಕಿದ ಹಿರಿಮೆ ಇವನಿಗೆ ಸಲ್ಲಬೇಕು. 'ನಯಸೇನ ದೇವ, ನಯಸೇನ ಮುನಿ, ನಯಸೇನ ಬುಧ'[11] ಎಂದೆಲ್ಲ ಇವನನ್ನು ಸಂಬೋಧಿಸಲಾಗಿದೆ. ಸ್ವತಹ ತಾನು "ರಾಜ್ಯ ಪೂಜ್ಯಂ ನೃಪ ವಂದ್ಯಂ"[12] ಎಂದು ಹೇಳಿಕೊಂಡಿದ್ದಾನೆ. ಈತನ ಧರ್ಮಾಮೃತ ಕಾವ್ಯಕ್ಕೆ ಒಂದು ಚಾರಿತ್ರಿಕ ಮಹತ್ವವಿದೆ. ಜೈನಧರ್ಮ ತನ್ನ ಪ್ರತಿಷ್ಠೆ ಮನ್ನಣೆಗಳನ್ನು ಕಳೆದುಕೊಂಡು ಕೊಂಚಮಟ್ಟಿಗೆ ಮಸುಕಾಗಿದ್ದ ಕಾಲದಲ್ಲಿ ಅದನ್ನು ಮತ್ತೆ ಜನಪರಗೊಳಿಸಬೇಕೆಂಬ ಇವನ ಆಶಯವೆ ಈ ಕೃತಿರೂಪದಲ್ಲಿ ವ್ಯಕ್ತವಾಗಿದೆ.

ಜೈನ ಮಹಾ ವೃತಗಳಲ್ಲಿ ವೃತವನ್ನು ಆಚರಿಸಿ ಸದ್ಗತಿಯನ್ನು ಪಡೆದ 14 ಮಹಾಪುರುಷರು ಕಥೆಗಳನ್ನು 14 ಆಶ್ವಾಸಗಳಲ್ಲಿ ನಿರೂಪಿಸಿದ್ದಾನೆ. ಪ್ರತಿ ಆಶ್ವಾಸವು ಜೈನ ಸಮ್ಯಕ್ ದರ್ಶನದ ಒಂದೊಂದು ತತ್ವವನ್ನು ಸಾರವತ್ತಾಗಿ ನಿವೇದಿಸುತ್ತದೆ. ನಿಶ್ಯಂಕೆ, ನಿಷ್ಕಾಂಕ್ಷೆ ನಿರ್ವಿಚಿಕಿತ್ಸೆ ಅಮೂಢ ದೃಷ್ಟಿತ್ವ, ಉಪಗೂಹನ ಸ್ಥಿರೀಕರಣ, ವಾತ್ಸಲ್ಯ, ಧರ್ಮ ಭಾವನೆಗಳಲ್ಲದೆ ಪಂಚಾನು ವೃತಗಳಾದ ಅಹಿಂಸೆ, ಕಳ್ಳತನ ಮಾಡದಿರುವುದು, ಆಸ್ಥೆಯ, ಸತ್ಯ, ಬ್ರಹ್ಮಚರ್ಯ ಇವುಗಳ ಚಿತ್ತಾಕರ್ಷಕ ಪ್ರತಿಪಾದನೆ ಇದೆ. ಜನ

ಸಮ್ಮುಖವು, ದೇಶಿ ಸಂಪನ್ನವು ಆದ ಕಾವ್ಯಗಳ ನಿರ್ಮಿತಿಗೆ ಇದೊಂದು ಸಾರ್ಥಕ ನಿದರ್ಶನ. ಆದ್ದರಿಂದಲೆ "ಜನತೆಗಾಗಿ ಬರೆದ ಮೊದಲ ಜೈನ ಪುರಾಣ"[13] ಎಂದು ಇದನ್ನು ಕೊಂಡಾಡಲಾಗಿದೆ.

ಧರ್ಮಾಮೃತ ಹಲವು ಕಾರಣಗಳಿಗಾಗಿ ಕಾವ್ಯಾಸಕ್ತರಿಂದ ವಿಶೇಷ ಮೆಚ್ಚುಗೆಗೆ ಪಾತ್ರವಾಗಿದೆ. ತೀರ್ಥಂಕರರ ಚರಿತ್ರೆಗಳನ್ನು ಅಖಂಡ ಕಥನಕ್ರಮದಲ್ಲಿ, ಪ್ರೌಢ ಶೈಲಿಯಲ್ಲಿ ನಿರೂಪಿಸುತ್ತಿದ್ದ ಮಾರ್ಗ ಕವಿಗಳ ಹಾದಿಯನ್ನು ತೊರೆದು ಹದಿನಾಲ್ಕು ಜನ ಮಹಾಪುರುಷರ ಕಥೆಗಳನ್ನು ತತ್ವ ನಿಷ್ಠವಾದ ಖಂಡಕಥನ ಕ್ರಮದಲ್ಲಿ ನಿರೂಪಿಸಿದ್ದು ಈ ಮೆಚ್ಚುಗೆಗೆ ಒಂದು ಕಾರಣವಾದರೆ, ಜನಪದ ಕಥೆಗಾರನ ಕಥನ ಕೌಶಲ ಆ ಕಾಲದ ಜನಜೀವನ ವಾಸ್ತವಿಕ ವಿವರಗಳ ನಿರೂಪಣೆ ಇನ್ನೊಂದು ಕಾರಣ.

***ಆಚಣ್ಣ ಕ್ರಿ ಶ 12ನೇ ಶತಮಾನ***

ಸುಮಾರು 12ನೇ ಶತಮಾನದಲ್ಲಿ ಬಾಳಿಬದುಕಿದ ಆಚಣ್ಣ ಪುಲಿಗೆರೆಯವನು ಇವನು ಜೈನ ತೀರ್ಥಂಕರರಲ್ಲಿ 24 ನೆಯವನಾದ ವರ್ಧಮಾನ ಮಹಾವೀರನ ಚರಿತ್ರೆಯನ್ನು ನಿರೂಪಿಸುವ 'ವರ್ಧಮಾನ ಪುರಾಣ' ಎಂಬ ಕಾವ್ಯವನ್ನು ಬರೆದಿದ್ದಾನೆ. ಇದನ್ನು ಕನ್ನಡದ ಮೊದಲ 'ವರ್ಧಮಾನ ಪುರಾಣ'ವೆಂದು ಹೇಳಲಾಗಿದೆ. ಇವನ ಸಮಕಾಲೀನನಾದ ಸೈಯಡಿಯ 2ನೇ ನಾಗವರ್ಮನು ಒಂದು 'ವರ್ಧಮಾನ ಪುರಾಣ'ವನ್ನು ಬರೆದದ್ದು ಅವನ ಕಾಲ ಕ್ರಿಶ 1142 ಎಂದು ನಿಷ್ಕರ್ಷಿಸಲಾಗಿದೆ. ಹೀಗಿರುವುದರಿಂದ ಕಾವ್ಯಗಳಲ್ಲಿ ಯಾವುದು ಮೊದಲು ಎಂಬುದರ ನಿರ್ಣಯ ಆಗಬೇಕಿದೆ.

***ಸುರಂಗ ಕ್ರಿಶ 1500***

ಇವನು ಮತದಿಂದ ವೀರಶೈವನಾಗಿದ್ದು 'ತ್ರಿಷಷ್ಟಿ ಪುರಾತನರ ಚಾರಿತ್ರ್ಯಂ' ಎಂಬ ಬೃಹತ್ ಕಾವ್ಯವನ್ನು ಚಂಪೂ ಶೈಲಿಯಲ್ಲಿ ರಚಿಸಿದ್ದಾನೆ. ಇವನಿಗೆ ಕರ್ನಾಟಕ ಕವಿ ಚಕ್ರವರ್ತಿ ಎಂಬ ಬಿರುದು ಇತ್ತೆಂದು ತಿಳಿದು ಬರುತ್ತದೆ. ಆದರೆ ಅಂತಹ ಕವಿತಾ ಸಾಮರ್ಥ್ಯ ಪ್ರೌಢಿಮೆ ಇವನಿಗಿರಲಿಲ್ಲ.

**ವಚನಕಾರರು ಮತ್ತು ಇತರ ಕವಿಗಳು**

ಈ ಪ್ರದೇಶ ವಚನ ಚಳುವಳಿಗೆ ಸಂಬಂಧಿಸಿದ ಕೆಲವು ಸಾಂಸ್ಕೃತಿಕ ಚಟುವಟಿಕೆಗಳಿಗೆ ಭೂಮಿಕೆಯನ್ನು ಒದಗಿಸಿತು. ಆದಯ್ಯ, ಮುಕ್ತಾಯಕ್ಕ, ಅಜಗಣ್ಣನಂತಹ ಶಿವಶರಣರು ಆ ಚಟುವಟಿಕೆಗಳಿಗೆ ಚಾಲಕ ಶಕ್ತಿಗಳಾದರು. ಅವರಿಂದ ಆರಂಭಗೊಂಡ ಅನುಭಾವ ಸಾಹಿತ್ಯದ ರಚನೆ ಮುಂದೆ ಸ್ವರವಚನಗಳ ರೂಪದಲ್ಲಿ, ತತ್ವ ಪದಗಳ ರೂಪದಲ್ಲಿ, ಶತಕ ರೂಪದಲ್ಲಿ ಅನೇಕ ಪ್ರತಿಭಾವಂತ ಕವಿಗಳಿಂದ ಮೂಡಿ ನಿಂತಿತು.

***ಆದಯ್ಯ ಕ್ರಿ ಶ 1160***

ಇವನು ಮೂಲತಹ ಸೌರಾಷ್ಟ್ರದವನು. ತನ್ನ ಜೀವನದ ನಡುವಯಸ್ಸಿನಲ್ಲಿ ಪುಲಿಗೆರೆಗೆ ಬಂದು ನೆಲೆಸಿದನೆಂದು, ಹರಿಹರ–ರಾಘವಾಂಕರ ಕೃತಿಗಳಿಂದ ತಿಳಿದುಬರುತ್ತದೆ. ಪುಲಿಗೆರೆಯಲ್ಲಿದ್ದ ಸುರಹೊನ್ನೆ ಬಸದಿಯನ್ನು ಶಿವಾಲಯವನ್ನಾಗಿ ಮಾರ್ಪಡಿಸಿದ ಉಗ್ರ ಶಿವಭಕ್ತ ಇವನು. ಸೌರಾಷ್ಟ್ರದ ಸೋಮನಾಥ

ಎಂಬ ವಚನಾಂಕಿತದಲ್ಲಿ ವಚನಗಳನ್ನು ಬರೆದಿರುವನು ಎಂದು ವಿದ್ವಾಂಸರು ಗುರುತಿಸಿದ್ದಾರೆ.[14] ಈವರೆಗೆ ಇವನ ಒಟ್ಟು 403 ವಚನಗಳು ಲಭ್ಯವಾಗಿವೆ.

***ಅಜಗಣ್ಣ ಕ್ರಿಶ 1160***

ಬಸವಾದಿಗಳ ಸಮಕಾಲಿನನಾಗಿದ್ದ ಅಜಗಣ್ಣ ಲಕ್ಕುಂಡಿಯವನು. ತನ್ನ ತಂಗಿಯಾದ ಮುಕ್ತಾಯಕ್ಕನೊಂದಿಗೆ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 'ಮಸಳಿಕಲ್ಲಿ'ನಲ್ಲಿ ನೆಲೆಸಿ ಬೇಸಾಯ ವೃತ್ತಿಯನ್ನು ಅನುಸರಿಸುತ್ತಿದ್ದನು. 'ಮಹಾಘನ ಸೋಮೇಶ್ವರ' ಎನ್ನುವುದು ಇವನ ವಚನಾಂಕಿತವಾಗಿತ್ತು. ಈವರೆಗೆ 10 ವಚನಗಳು ಮಾತ್ರ ಲಭ್ಯವಾಗಿವೆ.

***ಮುಕ್ತಾಯಕ್ಕ ಕ್ರಿಶ 1160***

ಈಗಾಗಲೆ ಪ್ರಸ್ತಾಪಿಸಿರುವಂತೆ ಮುಕ್ತಾಯಕ್ಕ ಅಜಗಣ್ಣನ ತಂಗಿ, ಶ್ರದ್ಧಾವಂತೆಯಾದ ಶರಣೆ ಮತ್ತು ವಚನಕಾರ್ತಿ ಲಕ್ಕುಂಡಿ ಇವಳ ಮೂಲ ಸ್ಥಳ. ಆದರೆ ಇವಳು ಮಸಳಿಕಲ್ಲಿನಲ್ಲಿ ನೆಲೆಸಿದ್ದಳು. ಇವಳಿಗೆ ವಿವಾಹವಾಗಿತ್ತೆಂದು ಒಂದು ಅಭಿಪ್ರಾಯವಿದೆ.[15] ತನ್ನ ಅಣ್ಣನಾದ ಅಜಗಣ್ಣನೆ ಅವಳ ಆಧ್ಯಾತ್ಮಿಕ ಗುರು. ಅವನ ಹೆಸರೆ ಅವಳ ವಚನಗಳ ಅಂಕಿತವಾಗಿರುವುದನ್ನು ಗಮನಿಸಬಹುದಾಗಿದೆ. ಈವರೆಗೆ ಅವಳ 37 ವಚನಗಳು ಉಪಲಬ್ಧವಾಗಿವೆ. ಅವಳ ಬಹುಮುಖ್ಯ ವಿವರಗಳು ನಮಗೆ ತಿಳಿದುಬರುವುದು ಚಾಮರಸನ 'ಪ್ರಭುಲಿಂಗಲೀಲೆ' ಮತ್ತು 'ಶೂನ್ಯಸಂಪಾದನೆ'ಗಳಿಂದ ವಿವಿಧ ಮತಶ್ರದ್ಧೆಗಳಿಗೆ ಸೇರಿದ ಅನೇಕ ಅನುಭಾವಿ ಕವಿಗಳು ಈ ಪ್ರದೇಶದಲ್ಲಿ ಆಗಿಹೋಗಿದ್ದಾರೆ.

***ಪುಲಿಗೆರೆಯ ಸೋಮ***

ಕನ್ನಡದಲ್ಲಿ ಜನಪ್ರಿಯವಾಗಿರುವ 'ಸೋಮೇಶ್ವರ ಶತಕ'ದ ಕರ್ತೃ ಪುಲಿಗೆರೆಯ ಸೋಮ. ಹೆಸರೆ ಹೇಳುವಂತೆ ಇವನು ಪುಲಿಗೆರೆಯವನು. ಮತದಿಂದ ಬ್ರಾಹ್ಮಣನಾಗಿದ್ದು ಹರಿಹರರಲ್ಲಿ ಭೇದವೆಣಿಸದ ವಿಶಾಲಮತಿ ಎಂಬುದು ಅವನ ಕಾವ್ಯೋಕ್ತ ಪದ್ಯಗಳಿಂದ ವೇದ್ಯವಾಗುತ್ತದೆ. ವೇದಪ್ರಾಮಾಣ್ಯವಾದ ಮಾತುಗಳು ರಾಮಾಯಣ, ಮಹಾಭಾರತ ಭಾಗವತ ಪರಂಪರೆಯ ಕಥನಗಳು ಅವನ ಶತಕದಲ್ಲಿ ಉದೃತವಾಗಿದ್ದು ಸುಭಗವಾದ ಭಾಷಾಶೈಲಿ, ಮನೋಹರವಾದ ನೀತಿಬೋಧೆಗಳಿಂದ ಮನಸ್ಸಿಗೆ ಮುದ ಕೊಡುವ ಶಕ್ತಿ ಇವನ ಕಾವ್ಯಕ್ಕಿದೆ. ಈ ಕಾರಣದಿಂದಲೆ ಈ ಶತಕದ ಪದ್ಯಗಳು ಈಗಲು ಜನರ ನಾಲಿಗೆಯ ಮೇಲೆ ನಲಿಯುವ ನಾಣ್ಯಗಳಾಗಿವೆ. 'ಕೆಲವಂ ಬಲ್ಲವರಿಂದ ಕೇಳಿ ಕಲ್ತು', 'ರವಿ ಆಕಾಶಕ್ಕೆ ಭೂಷಣಂ', 'ಹಿತವಂ ತೋರುವಂ ಆತ್ಮಬಂಧು', 'ಕಲಿಸಿದಾತಂ ವರ್ಣಮಾತ್ರಂ ಗುರು', 'ಬಡವಂ ಬಲ್ಲಿದಾದನೆ' 'ಹರ ಕೊಲ್ಲಲ್ ಪರ ಕಾಯುವನೇ' ಇಂತಹ ಕೆಲವು ಉದಾಹರಣೆಗಳು ಮಾತ್ರ.

ಈ ಸೋಮೇಶ್ವರ ಶತಕವನ್ನು ರಚಿಸಿದವನು 'ಪಾಲ್ಕುರಿಕೆ ಸೋಮನಾಥ' ಎಂಬ ವಾದವೂ ಒಂದಿದೆ ಪಾಲ್ಕುರಿಕೆಯ ಸೋಮ ಕನ್ನಡದಲ್ಲಿ ಕೆಲವು ರಗಳೆಗಳನ್ನು ಬರೆದಿರುವನಾದರು ಅವನೆ ತೆಲುಗಿನಲ್ಲಿ 'ಬಸವಪುರಾಣಮು' ಎಂಬ ಕಾವ್ಯವನ್ನು ಬರೆದಿದ್ದು, ಅದನ್ನು ಕನ್ನಡದಲ್ಲಿ ಭೀಮಕವಿ 'ಬಸವ ಪುರಾಣ' ಎಂಬ ಹೆಸರಿನಿಂದ ಪುನರಚಿಸಿದ್ದಾನೆ. ಆದರೆ ಹೆಸರಿನಲ್ಲಿರುವ ಸಾಮ್ಯತೆಯನ್ನು ಹಿಡಿದು ಸೋಮೇಶ್ವರ ಶತಕ ಪಾಲ್ಕುರಿಕೆ ಸೋಮನದು ಎಂದು ಹೇಳಲು ಆಧಾರಗಳಿಲ್ಲ.

***ಸಿದ್ಧಮಲ್ಲಾರ್ಯ ಮತ್ತು ದಾನಪಾರ್ಯ ಕ್ರಿಶ 1500***

ಈ ಇಬ್ಬರು ಕವಿಗಳು ಗದಗ ಬಳಿಯ ಬೆಟಗೇರಿಯವರು. ಹೆಚ್ಚುಕಡಿಮೆ ಒಂದೆ ಕಾಲಘಟ್ಟದಲ್ಲಿ ಜೀವಿಸಿದ್ದರು. ಸಿದ್ದಮಲ್ಲಾರ್ಯನು 'ದೇವಾಂಗ ಪುರಾಣ' ಎಂಬ ಕೃತಿ ರಚಿಸಿದ್ದಾನೆ. ದಾನಪಾರ್ಯನು ದ್ವಿಪದಿ ಛಂದಸ್ಸಿನಲ್ಲಿ 'ಶಿವ ಸಂವಾದಿನಿ' ಕೃತಿ ಬರೆದಿದ್ದಾನೆ.

***ಬಸಪ್ಪಾರ್ಯ ಕ್ರಿಶ 1607***

ಈ ಕವಿಯ ಜೀವನದ ಬಗ್ಗೆ ತಿಳಿದು ಬರುವ ವಿವರಗಳೆಲ್ಲ ಮೌಖಿಕ ಮೂಲದಿಂದ ಸಂಗ್ರಹಿಸಿದವುಗಳಾಗಿದ್ದು ಅವುಗಳ ಪ್ರಕಾರ ಇವನು ಮುಳಗುಂದದವನು. ಆಶುಕವಿ, ಲಾವಣಿಕಾರ, ಇವನು 'ರಾಮರಾಯ ವಿಳಾಸ' ಎಂಬ ಕಾವ್ಯವನ್ನು ಬರೆದಿದ್ದಾನೆಂದು ಹೇಳುತ್ತಾರೆ. ಆದರೆ ಕೃತಿ ಉಪಲಬ್ಧವಿಲ್ಲ. ಇವನ ಕಿರಿಯ ಸಮಕಾಲೀನನಾದ ಮದನ ಕವಿ ಲಕ್ಷ್ಮೇಶ್ವರ ದವನು. ಇವನ ಕಾಲ ಕ್ರಿಶ 1700. ಇವನು 'ಘೋರಾಸುರ ಯುದ್ಧ' ಎಂಬ ಕೃತಿಯನ್ನು ಬರೆದಿರುವನೆಂದು ತಿಳಿದುಬರುತ್ತದೆ.[16]

***ಬಾಲಲೀಲಾ ಮಹಾಂತ ಶಿವಯೋಗಿ ಕ್ರಿಶ 19ನೇ ಶತಮಾನ***

ಇವರು ಮುಳಗುಂದದ ಮಹಾಂತಲಿಂಗ ದೇಶಿಕನ ಶಿಷ್ಯರು. ಮಹಾಂತ ಶಿವಯೋಗಿಗಳು ಅನಾಥ ಶಿಶುವಾಗಿ ಗುರುಗಳ ಕೈಗೆ ಸಿಕ್ಕು ಮುಂದೆ ಆಲಮಟ್ಟಿಯಲ್ಲಿ ಇದ್ದ ಇಬ್ಬರು ಶರಣ ದಂಪತಿಗಳಲ್ಲಿ ಬೆಳೆದು ಮುಳಗುಂದಕ್ಕೆ ಬಂದು ನೆಲೆಸಿದರು. ಇವರು ಅನೇಕ ಪವಾಡಗಳನ್ನು ನಡೆಸಿದರೆಂದು, ಕೃಷ್ಣರಾಜ ಒಡೆಯರ ವ್ಯಾದಿ ನಿವಾರಣೆ ಮಾಡಿದರೆಂದು ಅನೇಕ ದಂತಕಥೆಗಳಿವೆ. ಅನುಭಾವಿಯಾದ ಇವರು ವಿವಿಧ ಛಂದೋಲಯಗಳಲ್ಲಿ ವಿಭಿನ್ನ ವಸ್ತು ವಿಷಯಗಳಿಗೆ ಸಂಬಂಧಿಸಿದಂತೆ ಸ್ವರವಚನಗಳನ್ನು ಬರೆದಿದ್ದು ಆ ಕಾವ್ಯಗಳ ಸಂಗ್ರಹವನ್ನು 'ಕೈವಲ್ಯ ದರ್ಪಣ' ಎಂದು ಕರೆಯಲಾಗಿದೆ. ಇವರ ಸ್ವರವಚನಗಳ ಅಂಕಿತ 'ಮಹಂತಲಿಂಗ' ಇವರ ಜೀವನದ ವಿವರಗಳನ್ನು ದ್ಯಾಂಪುರದ ಚನ್ನಕವಿ 'ಬಾಲಲೀಲಾ ಮಹಾಂತೇಶ್ವರ ಪುರಾಣ'ದಲ್ಲಿ ನಿರವಿಸಿದ್ದಾನೆ.

**ಷಟ್ಪದಿ ಕವಿಗಳು**

ಷಟ್ಪದಿ ಕಾವ್ಯ ಸಂಪ್ರದಾಯದ ಹಿರಿಮೆಯನ್ನು ಹೆಚ್ಚಿಸಿದ ಇಬ್ಬರು ಕವಿಗಳು ಈ ಪರಿಸರದವರು ಎಂಬುದು ಗಮನಾರ್ಹ ಸಂಗತಿ. ಅವರಲ್ಲಿ ಒಬ್ಬ ಕುಮಾರವ್ಯಾಸ. ಮತ್ತೊಬ್ಬ ಚಾಮರಸ. ಮಹಾಕವಿಯಾದ ಕುಮಾರವ್ಯಾಸ ಇಡೀ ಯುಗದ ಸಾಹಿತ್ಯ ಸಂವೇದನೆಗಳನ್ನು ಪ್ರಭಾವಿಸಿದವನು. ಅವನ ಕಿರಿಯ ಸಮಕಾಲೀನನವನಾದ ಚಾಮರಸ ಭಕ್ತಿ ಪರಂಪರೆಯ ದರ್ಶನ ವಿಶುದ್ಧತೆಯನ್ನು ಹೆಚ್ಚಿಸಿದವನು.ಈ ಇಬ್ಬರು ಭಾಮಿನಿ ಲಯದಲ್ಲಿ ಮಾಡಿದ ಪ್ರಯೋಗಗಳು ಚರಿತ್ರಾರ್ಹವೆನಿಸಿವೆ.

***ಕುಮಾರವ್ಯಾಸ ಕ್ರಿಶ ಸು 1400***

ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ' ಒಂದು ಅಪೂರ್ವ ಪ್ರಾತಿಭ ಸೃಷ್ಟಿ. ಗಮಕ ರೂಪದ ಸಂಗೀತವಾಗಿ, ಮನಸೆಳೆವ ರಸಾತ್ಮಕ ಕಾವ್ಯವಾಗಿ ಅಲೌಕಿಕ ಪುಣ್ಯ ಶ್ರವಣದ ಕತೆಯಾಗಿ ಪಂಡಿತ ಪಾಮರರೆನ್ನದೆ ಎಲ್ಲರನ್ನು ಪ್ರಭಾವಿಸಿದ ಕಾವ್ಯವಿದು. ಇದರ ಕರ್ತೃವಾದ ಕುಮಾರವ್ಯಾಸ ಆ ಭೂಮಿಯ

ಪುಣ್ಯ. ಇವನ ಹೆಸರು ನಾರಾಣಪ್ಪ ಎಂಬುದು. ಇವನ ಮೂಲ ಸ್ಥಳದ ಬಗ್ಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲವಾದರು ಈಗ ಹುಬ್ಬಳ್ಳಿ ತಾಲೂಕಿನಲ್ಲಿ ಬರುವ ಆದರೆ ಗದಗಿಗೆ ಹತ್ತಿರವಿರುವ ಕೋಳಿವಾಡ ಎಂಬುದು ಬಹುಜನ ಸಮ್ಮತ ನಿಲುವು. ಇವನ ಕಾಲದ ಬಗ್ಗೆ ವಿದ್ವಾಂಸರಲ್ಲಿ ಮತಭೇದಗಳಿದ್ದು ಸು ಕ್ರಿಶ 14 ನೇ ಶತಮಾನ ಇವನು ಬಾಳಿಬದುಕಿದ ಕಾಲ ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಗದುಗಿನ ವೀರನಾರಾಯಣ ಸ್ವಾಮಿಯ ಭಕ್ತನಾಗಿದ್ದ ಇವನು ಹಿರಿಯ ಭಕ್ತ ಹಿರಿಯ ದ್ರಷ್ಟಾರ. ವ್ಯಾಸಭಾರತವನ್ನು ಅಪೂರ್ವವಾಗಿ ಪುನಃ ಸೃಷ್ಟಿಸಿದ್ದರಿಂದ ತನ್ನನ್ನು ಕುಮಾರವ್ಯಾಸನೆಂದು ಕರೆದುಕೊಂಡಿದ್ದಾನೆ. ಇವನ ಭಾರತ 'ಕುಮಾರವ್ಯಾಸ ಭಾರತ'ವೆಂದು, 'ಗದುಗಿನ ಭಾರತ'ವೆಂದು ಪ್ರಸಿದ್ಧವಾಗಿದೆ.

ವ್ಯಾಸ ಕೃತ ಭಾರತವನ್ನು ಕನ್ನಡದಲ್ಲಿ ಸಮಗ್ರವಾಗಿ ಪುನರಚಿಸಿದವರು ಇಬ್ಬರು ಒಬ್ಬ ಪಂಪ. ಇನ್ನೊಬ್ಬ ಕುಮಾರವ್ಯಾಸ. ಪಂಪನ ಭಾರತ ಮಾನವರ ರಾಗದ್ವೇಷಗಳ ಸಾಹಸ– ಪೌರುಷಗಳ ಸೋಲು–ಗೆಲುವುಗಳ ಕಥೆಯಾದರೆ; ನಾರಣಪ್ಪನ ಭಾರತ ಭಗವದ್ ಲೀಲಾವಿಲಾಸ ಭೂಮಿಕೆಯಾಗಿದೆ.[17] ಅಂತಲೇ ಅದು ಕೃಷ್ಣ ಭಾರತ. 'ಇದು ಮುರಾರಿಯ ಲೀಲೆಗೋಸುಗ ಉದಯಿಸಿದ ಜಗ' 'ಜೀವಜಾಲಕ್ಕೆಲ್ಲ,ವರ' ಕೆಲವರ ರಾಜೀವ ನಾಭನೆ ಒಡೆಯ' ಇದು ಕುಮಾರವ್ಯಾಸನ ದೃಷ್ಟಿ. ಈ ದೃಷ್ಟಿಯೆ ಇಡೀ ಕಾವ್ಯದ ಜೀವಶಕ್ತಿಯಾಗಿ ವ್ಯಾಪಿಸಿದೆ. ಮಾತ್ರವಲ್ಲ ಕಾವ್ಯದ ಎಲ್ಲ ಕ್ರಿಯೆಗಳನ್ನು, ಆಶಯಗಳನ್ನು ರೂಪಿಸಿದೆ ಮತ್ತು ನಿಯಂತ್ರಿಸಿದೆ.

ಕುಮಾರವ್ಯಾಸನ ಭಾರತ ಕಾವ್ಯ 10 ಪರ್ವಗಳಿಗೆ ನಿಲುಗಡೆಯಾಗಿದ್ದು ಅಪೂರ್ಣವಾಗಿದೆ ಎಂದು ಅನೇಕರು ಅಭಿಪ್ರಾಯ ಪಡುತ್ತಾರೆ. ಈ ಅಭಿಪ್ರಾಯಕ್ಕೆ ಇಂಬುಕೊಡುವಂತೆ ಜನತೆಯಲ್ಲಿ ದಂತಕಥೆಯೊಂದು ಇದ್ದು ಅದರ ಪ್ರಕಾರ ನಾರಾಣಪ್ಪ ಪ್ರತಿನಿತ್ಯ ತ್ರಿಕುಟೇಶ್ವರ ದೇವಾಲಯದ ಒಂದು ಕಂಬದ ಬಳಿ ಕುಳಿತು ಕಾವ್ಯ ಬರೆಯುತ್ತಿದ್ದನು. ಮಹಾಭಾರತದ ದೃಶ್ಯಗಳು, ಘಟನೆಗಳು, ಆ ಭಾರತದ ನಿಜವಾದ ಪಾತ್ರಗಳಿಂದಲೆ ಅಭಿನಯಿಸಲ್ಪಡುತ್ತಿದ್ದವು. ಆ ದೃಶ್ಯಗಳನ್ನೆ ಕುಮಾರವ್ಯಾಸ ತನ್ನ ಕಾವ್ಯ ರೂಪಕ್ಕೆ ಇಳಿಸುತ್ತಿದ್ದ. ದುರ್ಯೋಧನ–ಭೀಮರ ಗದಾಯುದ್ಧದ ಪ್ರಸಂಗ ಬಂದಿತು. ಅಲ್ಲಿ ಜರುಗುತ್ತಿದ್ದ ಆ ದೃಶ್ಯವನ್ನು ಪರದೆಯ ಈಚೆ ಕುಳಿತು ನೋಡುತ್ತಿದ್ದ ನಾರಣಪ್ಪನಿಗೆ ತಡೆದುಕೊಳ್ಳಲು ಆಗಲಿಲ್ಲ.ಆ ದೃಶ್ಯವನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬ ಬಯಕೆ ಹುಟ್ಟಿ ಅವನು ದೇವಾಲಯದ ಒಳಭಾಗವನ್ನು ಪ್ರವೇಶಿಸಿದ. ಆಗಲೆ ಅವನು ಕಣ್ಣು ಕಳೆದುಕೊಂಡನು. ಅಲ್ಲಿಗೆ ಕಾವ್ಯವು ನಿಲುಗಡೆಯಾಯಿತು. ಈ ದಂತಕಥೆಯ ಆಶಯ ಏನೆ ಇರಲಿ ಅವನ ಭಾರತ ಕಾವ್ಯ ಮಾತ್ರ ಅಪೂರ್ಣವಾಗಿಲ್ಲ ಸಂಪೂರ್ಣವಾಗಿಯೆ ಇದೆ. ಕನ್ನಡದಲ್ಲಿ ರಚನೆಯಾಗಿರುವ ಎಲ್ಲಾ ಭಾರತ ಕಾವ್ಯಗಳು ಒಬ್ಬ ವೀರನ ಪಟ್ಟಾಭಿಷೇಕದೊಂದಿಗೆ ಪರಿಸಮಾಪ್ತಿಗೊಳ್ಳುವುದು ವಾಡಿಕೆ. ಪಂಪನ ಕಾವ್ಯ ಅರ್ಜುನನ, ರನ್ನನ ಕಾವ್ಯ ಭೀಮನ, ಅಂತೆ ಕುಮಾರವ್ಯಾಸನ ಕಾವ್ಯ ಧರ್ಮಜನ ಪಟ್ಟಾಭಿಷೇಕದೊಂದಿಗೆ ಕೊನೆಯಾಗುತ್ತದೆ ಎಂಬುದನ್ನು ಲಕ್ಷಿಸಬೇಕು. ವ್ಯಾಸನಲ್ಲಿ ಬರುವ ಸ್ತ್ರೀಪರ್ವ, ಅನುಶಾಸಿಕಪರ್ವ ಆಸ್ತಿಕ ಪರ್ವಗಳ ಸಾರತತ್ವವನ್ನು ಇವನು 10ನೇ ಪರ್ವದಲ್ಲಿ ಬಿಡದೆ ಸಂಗ್ರಹವಾಗಿ ನಿರೂಪಿಸಿದ್ದಾನೆ ಎನ್ನುವುದನ್ನು ಮರೆಯಕೂಡದು.

***ಚಾಮರಸ ಕ್ರಿಶ 1430***

ಚಾಮರಸ ಕನ್ನಡದ ಸತ್ವಪೂರ್ಣ ಕವಿಗಳಲ್ಲಿ ಒಬ್ಬ. ಇವನ ಊರು ಗದುಗಿನ ಸಮೀಪದಲ್ಲಿ ಬರುವ **'ನಾರಾಯಣಪುರ'** ಅಥವಾ **'ನಾಗನಾಪುರ'** ಆಗಿರಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ.18 ವಿಜಯನಗರದ ಅರಸ ಪ್ರೌಢದೇವರಾಯನ ಕಾಲದಲ್ಲಿ ನೆಲೆಸಿದ್ದ ನೂರೊಂದು ವಿರಕ್ತರಲ್ಲಿ ಇವನೊಬ್ಬನಾಗಿದ್ದನೆಂದು ತಿಳಿದು ಬರುತ್ತದೆ. ಇವನು ಕುಮಾರವ್ಯಾಸನ ಸೋದರ ಸಂಬಂಧಿಯಾಗಿದ್ದನೆಂಬ ಐತಿಹ್ಯವೂ ಇದೆ. ಈ ಐತಿಹ್ಯವನ್ನು ಸಮರ್ಥಿಸುವಂತಹ ಬಲವಾದ ಆಧಾರಗಳಿಲ್ಲ.

ಅಲ್ಲಮನನ್ನು ಕುರಿತು ಇವನು ಬರೆದ 'ಪ್ರಭುಲಿಂಗಲೀಲೆ' ಕನ್ನಡ ಮೌಲಿಕ ಕಾವ್ಯ ಮಾತ್ರವಲ್ಲ ಜನಪ್ರಿಯ ಕಾವ್ಯವು ಆಗಿದೆ. ಹಳ್ಳಿ ಹಳ್ಳಿಗಳಲ್ಲಿ ಜನರು ಇದನ್ನು ಪಟಣ–ವಾಚನ ಮಾಡಿರುವುದನ್ನು ನೋಡಿದ್ದೇವೆ ಕೇಳಿದ್ದೇವೆ. ಈ ಕಾವ್ಯ ತೆಲುಗು, ತಮಿಳು, ಸಂಸ್ಕೃತ, ಮರಾಠಿ ಮೊದಲಾದ ಭಾಷೆಗಳಿಗೆ ಅನುವಾದಗೊಂಡಿರುವುದು ಅದರ ಸತ್ವಪೂರ್ಣತೆ ಮತ್ತು ಜನಪ್ರಿಯತೆಗೆ ಸಾಕ್ಷಿ.

12ನೇ ಶತಮಾನದ ಹಿರಿಯ ಅನುಭಾವಿಯಾದ ಅಲ್ಲಮಪ್ರಭುವನ್ನು ತನ್ನ ಕಾವ್ಯಕ್ಕೆ ವಸ್ತುವನ್ನಾಗಿಸಿಕೊಂಡಿರುವ ಚಾಮರಸ ವೀರಶೈವ ಮತದ ತಾತ್ವಿಕ ಗ್ರಹಿಕೆಗಳನ್ನು ಕಾವ್ಯ ಧರ್ಮಕ್ಕೆ ಒಗ್ಗಿಸಿದ್ದಾನೆ. ಇದೇ ವಸ್ತುವನ್ನಿಟ್ಟುಕೊಂಡು ಮಹಾಕವಿ ಹರಿಹರನು 'ಪ್ರಭುದೇವರ ರಗಳೆ'ಯನ್ನು ಬರೆದಿದ್ದಾನೆ. ಒಂದೆ ವಸ್ತುವಿನ ನಿರ್ವಹಣೆಯಲ್ಲಿ ಈ ಇಬ್ಬರು ತೋರಿರುವ ಕೈಚಳಕ ಭಿನ್ನವಾಗಿದೆ. ಹರಿಹರ ಅಲ್ಲಮನಿಗೆ ಸಮೀಪಕಾಲೀನನಾದ ಕವಿ. ಹೀಗಾಗಿ ಅಲ್ಲಮನ ಜೀವನದ ಬಗೆಗೆ ಅವನಿಗೆ ದೊರೆತ ವಿವರಗಳು ಹೆಚ್ಚು ವಾಸ್ತವವಾಗಿವೆ. ಇದರಿಂದಾಗಿ ಪ್ರಭುದೇವರ ರಗಳೆಗೆ ಅಧಿಕೃತತೆ ಪ್ರಾಪ್ತವಾಗಿದೆ. ಪ್ರಭುದೇವರಿಗು ಚಾಮರಸನಿಗು ಮೂರು ಶತಮಾನಗಳ ಅಂತರವಿದೆ. ಈ ಅಂತರ ಚಾಮರಸನ ಕೃತಿಯ ಸ್ವರೂಪವನ್ನು ಬೇರೆಯಾಗಿಸಿದೆ. ಚಾಮರಸನ ಕಾಲಕ್ಕಾಗಲೆ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿತ್ತು. ಆ ಹೊತ್ತಿಗೆ ವೀರಶೈವ ಪುರಾಣ ಸಂಪ್ರದಾಯ ಒಂದು ತಲೆಯೆತ್ತಿ ಬಸವ ಅಲ್ಲಮರಂತಹ ಶರಣರ ಚರಿತ್ರೆಗಳು ಪುರಾಣದ ಪರಿವೇಶ ತೊಟ್ಟಿದ್ದವು. ಈ ಪ್ರಭಾವ ಚಾಮರಸನ ಕೃತಿಯ ಮೇಲೂ ಆಗಿದೆ. ಆದ್ದರಿಂದಲೆ ಪ್ರಭುಲಿಂಗಲೀಲೆ ವಾಸ್ತವದ ವಿವರಗಳಿಗಿಂತ ತುಸು ಹೆಚ್ಚಾಗಿಯೆ ಕಲ್ಪನಾತ್ಮಕವಾಗಿದೆ. ಹರಿಹರನ ಬರಹ ಚರಿತ್ರೆ ನಿಷ್ಠವಾಗಿದ್ದರೆ; ಚಾಮರಸನದು ಪುರಾಣ ನಿಷ್ಠ. ಹರಿಹರನ ರಗಳೆಯಲ್ಲಿ ಕಂಡುಬರುವ ಚಾರಿತ್ರಿಕ ವ್ಯಕ್ತಿಯಾದ ಕಾಮಲತೆಯ ಜಾಗದಲ್ಲಿ ಚಾಮರಸ ಪುರಾಣದ ಮಾಯೆಯನ್ನು ತಂದು ನಿಲ್ಲಿಸುವುದು ಇದಕ್ಕೊಂದು ಸಾಕ್ಷಿ. ಹರಿಹರನ ಅಲ್ಲಮ ಶ್ರೇಷ್ಠ ಮಾನವನಾಗಿದ್ದರೆ; ಚಾಮರಸನ ಅಲ್ಲಮ ಮಾನವ ರೂಪದಲ್ಲಿ ಬಂದ ಸಾಕ್ಷಾತ್ ಪರಶಿವನೇ ಆಗಿದ್ದಾನೆ. ಈ ದೃಷ್ಟಿ ಭೇದ ಇವರಿಬ್ಬರ ಕಾವ್ಯದ ಚೌಕಟ್ಟನ್ನು ಭಿನ್ನವಾಗಿಸಿದೆ ಎನ್ನಬೇಕು.

**ಶಾಸ್ತ್ರ ಕವಿಗಳು**

ಈ ಪರಿಸರದಲ್ಲಿ ಸಮೃದ್ಧವಾದ ಕಾವ್ಯ ಪರಂಪರೆಯೊಂದು ಬೆಳೆದಂತೆ ಶಾಸ್ತ್ರ ಪರಂಪರೆಯು ಬೆಳೆಯಲಿಲ್ಲ. ಶ್ರೀಧರಾಚಾರ್ಯ, 2ನೇ ನಾಗವರ್ಮರಂತಹ ಶಾಸ್ತ್ರಕವಿಗಳು ಬೆಲೆಯುಳ್ಳ ಕೃತಿಗಳನ್ನು ರಚಿಸಿದ್ದಾರೆ.

***ನಯಸೇನ ಸೂರಿ ಕ್ರಿಶ 1053***

ಈಗಾಗಲೆ ಧರ್ಮಾಮೃತದ ನಯಸೇನನ ಬಗ್ಗೆ ಪ್ರಸ್ತಾಪಿಸಲಾಗಿದೆ. ಅವನಿಗಿಂತಲು ಹಿರಿಯನಾದ ನಯಸೇನಸೂರಿ ವ್ಯಾಕರಣದ ನಯಸೇನ ಎಂದು ಪರಿಚಿತನಾಗಿದ್ದಾನೆ. ಇವನು ಮುಳಗುಂದದವನು. ಮತದಿಂದ ಜೈನ. ಶಬ್ದಶಾಸ್ತ್ರದಲ್ಲಿ ತರ್ಕಶಾಸ್ತ್ರಲ್ಲಿ ಪಾರಂಗತನಾಗಿದ್ದ ಇವನು ರಾಜಕೀಯವಾಗಿಯೂ ಪ್ರಭಾವಶಾಲಿಯಾಗಿದ್ದನು. ಇವನ ಗುರು ಒಂದನೆಯ ನರೇಂದ್ರಸೇನ. ಈ ನಯಸೇನ ಸೂರಿ ವೈಯಾಕರಣನಾಗಿದ್ದನೆಂದು ಕ್ರಿಶ 1053 ರ ಮುಳಗುಂದದ ಶಾಸನ ಮತ್ತು ಅನಂತರದ ಲಕ್ಷ್ಮೇಶ್ವರದ ಶಾಸನಗಳಲ್ಲಿ ಬಣ್ಣಿಸಲಾಗಿದೆ. ಆದರೆ ಅವನ ಕೃತಿ ಉಪಲಬ್ಧವಿಲ್ಲ.

***"ನಿನಗೇನೆಂಬೆನೊ ಶಾಕಟಾಯನ ಮುನೀಶಂನಾನೆ ಶಬ್ದಾನುಶಾ***
***ಸನದೊಳ್ ಪಾಣಿನಿ ಪಾಣಿನೀಯ ದೊಳೆ ಚನ್ದ್ರಂ ಚಾನ್ದ್ರಂದೊಳೆ ತಜ್ಜಿನೇ***
***ನ್ದ್ರನೆ ಜೈನೇಂನ್ದ್ರದೊಳಾ ಕುಮಾರನೆ ಗಡಂ ಕೌಮಾರಗೊಳ್ಪೋಲ್ವರೆ***
***ಪೋಲನ್ನರ್ಯಯಸೇನ ಪಣಿತರೋಳನ್ಯರ್ವ್ವಾರ್ಧಿರ್ವ್ವೀ ತೋರ್ವೀರ್ಯರೊಳ್"***[19]

ಎಂಬೀ ಸಾಲುಗಳು ಅವನ ಶಾಸ್ತ್ರ ಪರಿಣಿತಿಯನ್ನು ಸಾದರಪಡಿಸುತ್ತವೆ.

***ಶ್ರೀಧರಾಚಾರ್ಯ ಕ್ರಿ ಶ 1049***

ಇವನು 11ನೇ ಶತಮಾನದ ನಡುಗಾಲದಲ್ಲಿ ನರಗುಂದದಲ್ಲಿ ಬಾಳಿ ಬದುಕಿದವನು. ಇವನು ಬರೆದ 'ಜಾತಕತಿಲಕ' ಕನ್ನಡದ ಮೊದಲ ಜ್ಯೋತಿಷ್ಯ ಶಾಸ್ತ್ರಗ್ರಂಥ. ಇವನು 'ಚಂದ್ರಪ್ರಭಾಚರಿತೆ' ಎಂಬ ಪುರಾಣ ಕಾವ್ಯವನ್ನು ರಚಿಸಿದ್ದಾನೆಂದು ಹೇಳಲಾಗಿದೆ.[20] ಆದರೆ ಅದು ಉಪಲಬ್ಧವಾಗಿಲ್ಲ 'ಜಾತಕತಿಲಕ'ವು ಚಂಪೂ ಶೈಲಿಯಲ್ಲಿದ್ದು "ಸಕಲಾಚಾರ್ಯ ಮತಾಂತಸ್ಸಾರಂ, ಹೃದಯಂಗಮಂ ಅನ್ಯಶಾಸ್ತ್ರ ನಿರಪೇಕ್ಷಂ."[21]ಎಂದು ಶ್ಲಾಘಿಸಲ್ಪಟ್ಟಿದೆ. ಇದೊಂದು ಸ್ವತಂತ್ರ ಗ್ರಂಥವಾಗಿರುವದಕ್ಕಿಂತ ಸಂಕಲನ ಕೃತಿಯಾಗಿರುವ ಸಂಭಾವ್ಯತೆ ಹೆಚ್ಚು. ಆದರೆ ಶಾಸ್ತ್ರಕಾರನ ಸಂಕಲನ ಶಕ್ತಿ, ವಿಷಯ ಸಂಯೋಜನೆಯಲ್ಲಿನ ಪ್ರಮಾಣಬದ್ಧತೆ ಇವನ ಬರಹದ ವಿಶೇಷ ಗುಣಗಳಾಗಿವೆ.

***2ನೇ ನಾಗವರ್ಮ ಕ್ರಿಶ 1142***

ಈ ಪರಿಸರದಲ್ಲಿ ಆಗಿಹೋದ ಓರ್ವ ಬಹುದೊಡ್ಡ ಶಾಸ್ತ್ರಕಾರನೆಂದರೆ 2ನೇ ನಾಗವರ್ಮ. ಇವನು ಮೇಧಾವಿಯಾದ ಶಾಸ್ತ್ರಕಾರನಾಗಿರುವಂತೆ ಉದ್ಧಾಮ ಕವಿಯೂ ಆಗಿದ್ದ ಎಂಬುದನ್ನು ಈಚಿನ ಸಂಶೋಧನೆಗಳು ಶ್ರುತಪಡಿಸಿವೆ. ಇವನು ಸೈಯ್ಯಡಿಯವನು ಮತದಿಂದ ಜೈನ. ಜನ್ನನಿಗೆ ಸೋದರಸಂಬಂಧಿಯು, ಗುರುವು ಆಗಿದ್ದನು ಎನ್ನುವುದು ಇನ್ನೊಂದು ವಿಶೇಷ.ಕನ್ನಡ ಕಾವ್ಯಾಭ್ಯಾಸಕ್ಕೆ ಅಗತ್ಯವಾದ ವ್ಯಾಕರಣ ಛಂದಸ್ಸು, ಅಲಂಕಾರ ಮತ್ತು ಶಬ್ದಶಾಸ್ತ್ರಗಳಿಗೆ ಸಂಬಂಧಿಸಿದಂತೆ ಇವನು ಉದ್ಗ್ರಂಥಗಳನ್ನು ರಚಿಸಿದ್ದಾನೆ. 'ಕಾವ್ಯಾವಲೋಕನ' (ಮೀಮಾಂಸೆ) 'ಭಾಷಾಭೂಷಣ' (ಸಂಸ್ಕೃತ ಭಾಷೆಯಲ್ಲಿರುವ ಕನ್ನಡ ವ್ಯಾಕರಣ) 'ಛಂದೋವಿಚಿತಿ' (ಅನುಪಲಬ್ದ ಛಂದೋಗ್ರಂಥ) 'ಅಭಿದಾನ

ವಸ್ತುಕೋಶ' (ನಿಘಂಟು) ಇವಲ್ಲದೆ 'ವರ್ಧಮಾನ ಪುರಾಣ' ಎಂಬ ಚಂಪೂ ಕಾವ್ಯವನ್ನು ಇವರು ಬರೆದದ್ದು; ಈಚೆಗೆ ಅದರ ಹಸ್ತಪ್ರತಿ ಬಿ.ಎಸ್. ಸಣ್ಣಯ್ಯನವರಿಂದ ಶೋಧಗೊಂಡು ಪ್ರಕಟವಾಗಿದೆ.

***ಮಹಾಲಿಂಗ ದೇವ ಕ್ರಿಶ 1625***

ಪುಲಿಗೆರೆಯವನಾದ ಇವನು ಶರಣರ ಬೆಡಗಿನ ವಚನಗಳಿಗೆ ಟೀಕು ಬರೆದಿರುವನೆಂದು ತಿಳಿದುಬರುತ್ತದೆ.[22] ಈವರೆಗಿನ ಪರಿಶೀಲನೆಯಿಂದ ಕನ್ನಡದ ಪ್ರಾಚೀನ ಸಾಹಿತ್ಯವನ್ನೆಂತೊ ಅಂತೆ ಈ ಪ್ರದೇಶದ ಸಾಹಿತ್ಯ ರಚನೆಯನ್ನು ಈ ಮೂರು ಸಂಗತಿಗಳು ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಪ್ರಭಾವಿಸಿವೆ. ಮೊದಲನೆಯದು ರಾಜಾಶ್ರಯ; ಈ ಪ್ರದೇಶದ ಕವಿಗಳು ರಾಜಾಶ್ರಯದಲ್ಲಿದ್ದಾಗಿಯೂ ಪಂಪಾದಿಗಳಂತೆ ತಮ್ಮ ಆಶ್ರಿತ ರಾಜರನ್ನು ಕಾವ್ಯದ ನಾಯಕರನ್ನಾಗಿ ಮಾಡಿಕೊಳ್ಳುವ ಸಮೀಕರಣ ಮಾದರಿಯನ್ನು ಅನುಸರಿಸಲಿಲ್ಲ. ಅದರಂತೆ ಆ ಸತ್ತೆಯನ್ನು ನಿರಾಕರಿಸುವ ದೃಷ್ಟಿಕೋನದವರು ಆಗಿರಲಿಲ್ಲ.

ಎರಡನೆಯದು ಧರ್ಮ. ಈ ಪ್ರದೇಶದ ಕವಿಗಳ ಕಾವ್ಯ ರಚನೆಗೆ ಬೇಕಾದ ತಾತ್ವಿಕ ಒತ್ತಾಸೆಯನ್ನು ಪೋಷಣೆಯನ್ನು ಧರ್ಮ ಒದಗಿಸಿದೆ. ಮೂರನೆಯದು ಸಂಸ್ಕೃತ ಸಾಹಿತ್ಯ; ಈ ಪರಿಸರದ ಕವಿಗಳು ಜನ ಪ್ರಚೂರವಾದ ದೇಶಿ–ಮಾರ್ಗದ ಕಡೆಗೆ ಒಲವುಳ್ಳವರು ಎಂದು ಎತ್ತಿಹೇಳಬಹುದಾದರೂ ಕಥಾವಸ್ತು, ಕಾವ್ಯರೂಪ, ಶೈಲಿ ಮತ್ತು ನುಡಿಗಟ್ಟುಗಳ ವಿರಚನೆಯಲ್ಲಿ ಸಂಸ್ಕೃತ ಸಾಹಿತ್ಯಕ್ಕೆ ಋಣಿಯಾಗಿದ್ದಾರೆ ಎಂಬುದನ್ನು ಗಮನಿಸಬೇಕಾಗುತ್ತದೆ.

**ಕೊನೆಟಿಪ್ಪಣಿಗಳು**

1. ಧನವಂತ ಹಾಜವಗೋಳ – ಮುಳಗುಂದ ನಾಡು ಒಂದು ಅಧ್ಯಯನ – ಪುಟ ಸಂಖ್ಯೆ 171 – 216
2. ಬಿ ರಾಜಶೇಖರಪ್ಪ – ಬೆಳ್ವೊಲ ಬೆಳಕು – ಪುಟ ಸಂಖ್ಯೆ – 176
3. ತಿ. ನಂ. ಶ್ರೀಕಂಠಯ್ಯ – ಪಂಪ – ಪುಟ ಸಂಖ್ಯೆ – 10
4. ಧನವಂತ ಹಾಜವಗೋಳ – ಮುಳಗುಂದ ನಾಡು ಒಂದು ಅಧ್ಯಯನ – ಪುಟ ಸಂಖ್ಯೆ – 171 5)
5. ಅದೇ ಪುಟ ಸಂಖ್ಯೆ – 175
6. ಅದೇ ಪುಟ ಸಂಖ್ಯೆ – 174
7. ಅದೇ ಪುಟ ಸಂಖ್ಯೆ – 174
8. ಅದೇ ಪುಟ ಸಂಖ್ಯೆ – 174
9. ರಂ ಶ್ರೀ ಮುಗಳಿ ಕನ್ನಡ ಸಾಹಿತ್ಯ ಚರಿತ್ರೆ – ಪುಟ ಸಂಖ್ಯೆ – 115
10. ಧನವಂತ ಹಾಜವಗೋಳ – ಮುಳಗುಂದ ನಾಡು ಒಂದು ಅಧ್ಯಯನ – ಪುಟ ಸಂಖ್ಯೆ 176
11. ಅದೇ ಪುಟ ಸಂಖ್ಯೆ – 179
12. ಅದೇ ಪುಟ ಸಂಖ್ಯೆ – 180
13. ರಂ ಶ್ರೀ ಮುಗಳಿ – ಕನ್ನಡ ಸಾಹಿತ್ಯ ಚರಿತ್ರೆ ಪುಟ ಸಂಖ್ಯೆ – 126 – 128

14. ಬಿ. ರಾಜಶೇಖರಪ್ಪ– ಬೆಳ್ವೊಲ ಬೆಳಕು – ಪುಟ ಸಂಖ್ಯೆ – 181
15. ಅದೇ ಪುಟ ಸಂಖ್ಯೆ –181
16. ಅದೇ ಪುಟ ಸಂಖ್ಯೆ–184
17. ರಂ ಶ್ರೀ ಮುಗಳಿ – ಕನ್ನಡ ಸಾಹಿತ್ಯ ಚರಿತ್ರೆ – ಪುಟ ಸಂಖ್ಯೆ – 89 – 99
18. ಬಿ ರಾಜಶೇಖರಪ್ಪ – ಬೆಳ್ವೊಲ ಬೆಳಕು – ಪುಟ ಸಂಖ್ಯೆ – 183
19. ಧನವಂತ ಹಾಜವಗೋಳ – ಮುಳಗುಂದ ನಾಡು ಒಂದು ಅಧ್ಯಯನ – ಪುಟ ಸಂಖ್ಯೆ – 177
20.ರಂ ಶ್ರೀ ಮುಗಳಿ – ಕನ್ನಡ ಸಾಹಿತ್ಯ ಚರಿತ್ರೆ ಪುಟ – 118
21. ಅದೇ ಪುಟ ಸಂಖ್ಯೆ – 118
22.ಬಿ ರಾಜಶೇಖರಪ್ಪ – ಬೆಳ್ವೊಲ ಬೆಳಕು – ಪುಟ ಸಂಖ್ಯೆ – 183